ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ **23..02.2026.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ**

ನಾನು ಮತ್ತು ಒಂದನೇ ಪ್ರತಿವಾದಿಯ ಕಟುಂಬದವರು ಒಂದೇ ಕಟುಂಬದವರು. ಒಂದನೇ ಪ್ರತಿವಾದಿ ಜೀವಂತವಿದ್ದಾಗ ಫೌತಿ ಖಾತೆ ಆಧಾರದ ಮೇಲೆ ಕುಟುಂಬದ ಆಸ್ತಿಗಳನ್ನು ಅವರ ಗಂಡನಿಂದ ಅವರ ಹೆಸರಿನ ಮೇಲೆ ವರ್ಗಾಹಿಸಿಕೊಳ್ಳಲು ಅರ್ಜಿ ನೀಡಿದ್ದರು ಎಂದರೆ ಸರಿ. ಆ ರೀತಿ ವರ್ಗಾವಣೆ ಮಾಡುವ ಮುನ್ನ ಗ್ರಾಮಾಧಿಕಾರಿಗಳು ಗ್ರಾಮದಲ್ಲಿ ಪ್ರಚಾರ ಹೊರಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 27.04.2022 ರಂದು ಅದೇ ರೀತಿ ಒಂದನೇ ಪ್ರತಿವಾದಿ ತಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಶ್ರವಣೂರಿನ ಸರ್ವೆ ನಂಬರ್ 86/1ಎ ನಲ್ಲಿ 1 ಎಕರೆ 20, ಸರ್ವೆ ನಂಬರ್ 88/8 ರಲ್ಲಿ 14 ಗುಂಟೆ, ಸರ್ವೆ ನಂಬರ್ 93/4ಬಿ ನಲ್ಲಿ 34 ಗುಂಟೆ, ಸರ್ವೆ ನಂಬರ್ 93/2 ಬಿ ನಲ್ಲಿ 12 ½ ಗುಂಟೆ ಸರ್ವೆ ನಂಬರ್ 93/3 ರಲ್ಲಿ 19 ಗುಂಟೆ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಸ್ವತ್ತುಗಳು ಚಿಕ್ಕಯ್ಯ ರವರಿಂದ ಬಂದಿದ್ದು.

2. ನನ್ನ ತಾಯಿ ಹೆಸರು ಚೌಡಮ್ಮ. ನಾನು ಮತ್ತು ಎರಡನೇ ವಾದಿ ನಮ್ಮ ತಂದೆಯ ತಂಗಿ ಲಕ್ಷ್ಮಮ್ಮ ಆಸ್ತಿಗಳನ್ನು ಫೌತಿ ಖಾತೆಯ ಮೂಲಕ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ. ನಾವು ಕೇವಲ ಮರಣ ಪ್ರಮಾಣ ಪತ್ರವನ್ನು ನೀಡಿ ಖಾತೆ ಮಾಡಿಸಿಕೊಂಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರಿಸಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯನ್ನು ಸಹ ಖಾತೆ ಮಾಡಿಸುವಾಗ ನೀಡಿದ್ದ ದಾಖಲೆ ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿದ ಮೇರೆಗೆ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಿ ಡಿ 1 ಪ್ರಕಾರ ಚಿಕ್ಕಯ್ಯರವರಿಗೆ ಕಾಳಮ್ಮ ಎಂಬ ಒಬ್ಬ ಹೆಂಡತಿಯನ್ನು ಮಾತ್ರ ತೋರಿಸಿರುತ್ತೇವೆ ಎಂದರೆ ಸರಿ. ಅದರ ಪ್ರಕಾರ ಚಿಕ್ಕಯ್ಯ ರವರಿಗೆ ನಾಲ್ಕು ಜನ ಮಕ್ಕಳಿದು ಅದನ್ನು ತೋರಿಸಿದ್ದೇವೆ ಎಂದರೆ ಸರಿ. ನಿ ಡಿ 1 ರ ಪ್ರಕಾರ ಲಕ್ಷ್ಮಮ್ಮ ನವರ ಆಸ್ತಿಗಳನ್ನು ಖಾತೆ ಮಾಡಿಸಿಕೊಂಡಿರುತ್ತೇವೆ. ಈ ಖಾತೆ ಬದಲಾವಣೆಗಾಗಿ ನಮ್ಮ ತಾಯಿಯ ತಂಗಿಯಾದ ದೇವಮ್ಮರವರಿಂದ ಒಂದು ಒಪ್ಪಿಗೆ ಪತ್ರವನ್ನು ಸಹ ಪಡೆದಿದ್ದೇವು ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿ ಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸರ್ವೆ ನಂಬರ್ 78 ರ ಎರಡು ಆರ್ ಟಿ ಸಿ ಗಳನ್ನು ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿ ಡಿ 3

ಎಂದು ಗುರುತಿಸಲಾಯಿತು. ಸದರಿ ಲಕ್ಷ್ಮಮ್ಮ ನವರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಆ ಆಸ್ತಿಗಳು ಬೇರೆ ಇತ್ತು ಎನ್ನುತ್ತಾರೆ.

3. ನಾನು ಐದನೇ ವಾದಿಯನ್ನು ಸಹ ಈ ದಾವೆ ಯಲ್ಲಿ ಪಕ್ಷಗಾರರನ್ನಾಗಿಸಿದ್ದೇನೆ. ನಿ ಡಿ 1 ರಲ್ಲಿ ಸದರಿಯವರನ್ನು ತೋರಿಸಿಲ್ಲ. ಸರ್ವೆ ನಂಬರ್ 78 ರಲ್ಲಿ ಐದನೇ ವಾದಿಗೆ 1 ಎಕರೆ 20 ಗುಂಟೆ ಜಮೀನಿದೆ ಎಂದರೆ ಸರಿ . ಆ ಆಸ್ತಿಯನ್ನು ಸಹ ನಾವು ಈ ದಾವೆಯಲ್ಲಿ ಸೇರಿಸಿಲ್ಲ. ಸಾಕ್ಷಿ ಮುಂದುವೆರದು ಸದರಿ ಆಸ್ತಿ ಐದನೇ ವಾದಿಗೆ ನೇರವಾಗಿ ಖಾತೆಯಾಗಿರುತ್ತದೆ ಎನ್ನುತ್ತಾರೆ.

4. ನನ್ನ ತಾತ ಮತ್ತು ಪ್ರತಿವಾದಿ ಗಳ ತಂದೆ ಲೇಟ್ ಚಿಕ್ಕಯ್ಯರವರ ಹೆಸರು ಒಂದೇ ಆದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಗಳ ಆಸ್ತಿಗಳನ್ನು ಲಪಟಾಯಿಸಲು ಅಕ್ರಮ ಫೌತಿ ಖಾತೆ ಆಧಾರದ ಮೇಲೆ ಕಂದಾಯ ದಾಖಲಾತಿಗಳನ್ನು ನಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಿ ಪಿ 1 ನ್ನು ಸುಳ್ಳು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಜಮೀನನ್ನು ಅಭಿವೃದ್ದಿ ಪಡಿಸುತ್ತಿರುವುದನ್ನು ತಡೆಯಲು ಮತ್ತು ಪ್ರತಿವಾದಿಗಳು ವಿಭಾಗ ಮಾಡಿಕೊಂಡಿರುವಂತೆ ಸ್ವಾಧೀನದಲ್ಲಿದ್ದರೂ ಸಹ ಅವರ ಸ್ವಾಧೀನಕ್ಕೆ ತೊಂದರೆ ನೀಡಲು ಈ ಸುಳ್ಳು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ:**

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**